# ಕಬ್ಬಿಣವೇ ಇವರ ಬದುಕು!

ಮುಂಜಾವಿನಿಂದ ಮುಸ್ಸಂಜೆವರೆಗೂ ಬಿಸಿಲಲ್ಲೇ ಬಿಡುವಿಲ್ಲದ ದುಡಿಮೆ. ನೆತ್ತಿ ಸುಡುವ ಪ್ರಖರ ಬಿಸಿಲನ್ನೂ ಲೆಕ್ಕಿಸದೆ ಬೆಂಕಿ ಜತೆಯೇ ಇವರ ಕಾಯಕ.

■ ಡಿ.ಬಿ.ನಾಗರಾಜ
ಚಿತ್ರ: ಸಂಜೀವ ಅಕ್ಕಿ



ಬಯಲೇ ಇವರ ಆಲಯ, ಕಬ್ಬಿಣವೇ ಬದುಕು. ಕಬ್ಬಿಣದ ಕೆಲಸ ಬಿಟ್ಟರೆ ಬೇರೆ ಇನ್ನ್ಯಾವ ಕಸುಬು ಗೊತ್ತಿರದ ಲೋಹಾರ್ ಜನಾಂಗದ ಜನರಿವರು.

ಮೂಲ ನೆಲೆ ಮಧ್ಯಪ್ರದೇಶ. ಅಲ್ಲಿ ತಮ್ಮ ಜಿಲ್ಲೆ ಯಾವುದು, ಯಾವ ತಾಲ್ಲೂಕಿನ ಜನ ಎಂಬುದೇ ಇವರ ಅರಿವಿಗಿಲ್ಲ. ಹತ್ತು ಮಾತಾಡಿದರೂ, ಪ್ರತಿಕ್ರಿಯಿಸುವುದು ಮಾತ್ರ ಒಂದೆರಡಕ್ಕೆ. ಮಳೆಗಾಲದಲ್ಲಿ ಮಾತ್ರ ಇವರಿಗೆ ಶ್ರಮದ ಕೆಲಸದಿಂದ ಬಿಡುವು. ಆಗ ಮಾತ್ರ ಹುಟ್ಟೂರಲ್ಲಿ ಬಿಡಾರ.

ಉಳಿದ ಎಂಟೂ ತಿಂಗಳು ನಿರಂತರ ವಲಸೆ. ಬಯಲೇ ಆಲಯ. ಚಳಿ–ಬಿಸಿಲು ಲೆಕ್ಕಿಸದೆ ನಿರಂತರ ದುಡಿಮೆ. ಕಸುಬು, ಊಟ–ತಿಂಡಿ, ವಸತಿ ಪ್ರತಿಯೊಂದು ರಸ್ತೆ ಬದಿಯ ಬಿಡಾರದಲ್ಲೇ. ಬೆಳಿಗ್ಗೆ ಮೈಮುರಿದು ಬಿಡುವಿಲ್ಲದೆ ದುಡಿಯುವ ಇವರು ಮುಸ್ಸಂಜೆ ಬೆಳಕಲ್ಲಿ ಊಟ ಮಾಡಿ ಮಲಗಿದರೆ ಎಚ್ಚರಗೊಳ್ಳುವುದು ಮುಂಜಾನೆಯೇ.

ಮಧ್ಯಪ್ರದೇಶದ ಇಂದೋರ್‌ನಿಂದ ವಿಜಯಪುರಕ್ಕೆ ಬಂದಿದ್ದ ಲೋಹಾರ್ ಕುಟುಂಬಗಳು ಇಬ್ರಾಹಿಂಪುರ ರೈಲ್ವೆ ಗೇಟ್ ಬಳಿ ಬೀಡು ಬಿಟ್ಟಿದ್ದವು. ಐದು ಕುಟುಂಬಗಳ ಮೂವತ್ತು ಮಂದಿಗೆ ಕೆಲ ದಿನ ರಸ್ತೆ ಬದಿಯೇ ಆಸರೆ ನೀಡಿತ್ತು. ಇಲ್ಲಿ ಮಾತ್ರವಲ್ಲ, ಎಲ್ಲೆಡೆಯೂ ಇವರಿಗೆ ರಸ್ತೆ ಬದಿಯೇ ಕಾಯಂ ಆಸರೆ.

ಮಹಿಳೆ–ಮಕ್ಕಳ ತಾರತಮ್ಯವಿಲ್ಲ. ಎಲ್ಲರದ್ದೂ ಸಮಾನತೆಯ ದುಡಿಮೆ. ಕಬ್ಬಿಣ ಕಾಯಿಸಲು, ಕಾದಿದ್ದನ್ನು ಬಡಿಯಲು ಮಹಿಳೆಯರು ಹಿಂಜರಿಯಲ್ಲ. 15 ಮಕ್ಕಳು ಇವರೊಂದಿಗಿದ್ದು, ಪುಟ್ಟ ಮಕ್ಕಳನ್ನು ಹೊರತುಪಡಿಸಿದರೆ ಎಲ್ಲರೂ ಸುತ್ತಿಗೆ ಹಿಡಿಯುವವರೇ. ಚಿಲುಮೆಯ ಬೆಂಕಿ ಉರಿಸುವವರೇ..!

(40ನೇ ಪುಟ ನೋಡಿ)